# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ರವರ ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ

**ಸೂಚನೆ:**

ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಅತೀ ಹೆಚ್ಚು ಕೋಳಿ ಸಾಕಾಣಿಕೆದಾರರಿದ್ದು, ಈ ಜಿಲ್ಲೆಗಳು ಕೋಳಿ ಸಾಕಾಣಿಕೆಗೆ ಇಡೀ ಭಾರತ ದೇಶದಲ್ಲಿ ಇಲ್ಲದಂತ ಒಳ್ಳೆಯ ವಾತಾವರಣ ಹೊಂದಿದೆ, ಇಲ್ಲಿ ಉತ್ಪಾದನೆ ಆಗುವ ತಾಯಿ ಕೋಳಿ ಮೊಟ್ಟೆಗಳು ಇಡೀ ದೇಶಕ್ಕೆ ಹಾಗೂ ಅರಬ್ಬ್ ದೇಶಕ್ಕೆ ರಫ್ತಾಗುತ್ತದೆ. ಮಾಂಸದ ಕೋಳಿ ಸಾಕಾಣಿಕೆಗೂ ಸಹ ಒಳ್ಳೆಯ ವಾತಾವರಣವಿದ್ದು, ಇವುಗಳನ್ನು ರೈತರಿಗೆ ತಮ್ಮ ಉಪ ಕಸಬುನ್ನಾಗಿಸಿ ಸಣ್ಣ ಸಣ್ಣ ಪ್ರಮಾಣದಲ್ಲಿ ಕೋಳಿ ಸಾಕಾಣಿಕೆ ಮಾಡಲು ಅವಕಾಶವಿದ್ದು, ಈಗಾಗಲೇ ಸಾಕಷ್ಟು ರೈತರು ತಮ್ಮಲ್ಲಿರುವ ಚಿಕ್ಕ ಚಿಕ್ಕ ಜಮೀನಿನಲ್ಲಿ ಕೋಳಿ ಸಾಕಾಣಿಕೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಆದರೆ ಸರ್ಕಾರದಿಂದ ಇಂತಹ ರೈತರಿಗೆ ಯಾವುದೇ ರೀತಿಯ ಪ್ರೋತ್ಸಾಹ, ಕೋಳಿಗಳಿಗೆ ರೋಗ ರುಜಿನಗಳು ಬಂದಾಗ, ಪಶುವೈದ್ಯಾಧಿಕಾರಿಗಳ ಕೊರತೆ ಹಾಗೂ ಕೋಳಿ ಸಾಕಾಣಿಕೆಯಲ್ಲಿ ಆಗಿರುವ ಉತ್ತಮ ತಾಂತ್ರಿಕತೆಯ ತಂತ್ರಜ್ಞಾನದಿಂದ ವಂಚಿತರಾಗಿರುತ್ತಾರೆ. ಈ ಎಲ್ಲಾ ವಿಷಯವನ್ನು ಮಾನ್ಯ ಪಶುಸಂಗೋಪನಾ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

**ಹೇಳಿಕೆ:**

- ರಾಜ್ಯಾದ್ಯಂತ ಗ್ರಾಮೀಣ ಭಾಗದ 25000 ಮಹಿಳೆಯರಿಗೆ 5 ವಾರದ ತಲಾ 20 ನಾಟಿ ಕೋಳಿ ಮರಿಗಳನ್ನು ಉಚಿತವಾಗಿ ವಿತರಿಸುವ ಕಾರ್ಯಕ್ರಮ ಅನುಷ್ಠಾನದ ಹಂತದಲ್ಲಿದೆ.
- ಗ್ರಾಮೀಣ ಪ್ರದೇಶದ 686 ಬಡ ಜನರಿಗೆ ಪಂಜರದ ಜೊತೆಗೆ 22 ವಾರದ ಬಿ.ವಿ380 ಕೋಳಿಗಳನ್ನು ನೀಡುವ ಯೋಜನೆ ಜಾರಿಯಲ್ಲಿದೆ.
- ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಅಡಿ ಕೋಳಿಗಳಿಗೆ ಬರುವ ಖಾಯಿಲೆಗಳನ್ನು ಪರೀಕ್ಷಿಸಲು ಕೋಲಾರ, ಮೈಸೂರು, ಶಿವಮೊಗ್ಗ, ದಾವಣಗೆರೆ, ಬಳ್ಳಾರಿ, ಕಲಬುರಗಿ, ಶಿರಸಿ, ಶಿರಾ, ಮಂಗಳೂರು, ಬೀದರ್, ಬೆಳಗಾವಿ, ಬಾಗಲಕೋಟೆ ಜಿಲ್ಲೆಗಳಲ್ಲಿ ವ್ಯವಸ್ಥಿತವಾದ ಪ್ರಯೋಗಾಲಗಳು ಕಾರ್ಯನಿರ್ವಹಿಸುತ್ತಿವೆ. ಅಲ್ಲದೇ ಹೊಸದಾಗಿ ಪ್ರಸ್ತುತ ವರ್ಷದಲ್ಲಿ ಬಿಜಾಪುರ, ಧಾರವಾಡ, ಕೊಪ್ಪಳ, ಗದಗ, ರಾಯಚೂರು ಜಿಲ್ಲೆಗಳಲ್ಲಿ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗುತ್ತಿದೆ. ಉಳಿದ ಜಿಲ್ಲೆಗಳಲ್ಲಿ ಹಂತ ಹಂತವಾಗಿ ಪ್ರಯೋಗಾಲಯಗಳನ್ನು ಪ್ರಾರಂಭಿಸಲು ಯೋಜನೆಯನ್ನು ಹಮ್ಮಿಕೊಳ್ಳಲಾಗುವುದು.
- ನಿರುದ್ಯೋಗ ಯುವಕ/ಯುವತಿಯರಿಗೆ ಕೋಳಿ ಸಾಕಾಣಿಕೆಯ ಅಲ್ಪಾವಧಿ ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳಿ ಇವರ ವತಿಯಿಂದ ನಿರಂತರವಾಗಿ ಕೈಗೊಳ್ಳಲಾಗುತ್ತಿದೆ.

**ಇ–ಪಸಂಮೀ 177 ಸಲೆವಿ 2022**

ಪ್ರಭು ಬಿ. ಚವ್ಹಾಣ್
**ಪಶುಸಂಗೋಪನೆ ಸಚಿವರು,**